# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

*ಎಸ್‌ಸಿ.* **137/2020**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ಸುದೀಪ್ ಕುಮಾರ್ | | *ಪ್ರಮಾಣ ಮಾಡಿಸಿದ ದಿನಾಂಕಃ* |
| **ತಂದೆ/ಗಂಡನ ಹೆಸರು** | ಃ ಶ್ರೀ ಶಿವಲಿಂಗಶೆಟ್ಟಿಆರ್ | | **05.04.2025** |
| **ವಯಸ್ಸು** | ಃ **39** **ವರ್ಷ** | | |
| **ವೃತ್ತಿ** | ಃ ಪಿ.ಸಿ, ಸರಸ್ವತಿಪುರಂ ಪೋಲೀಸ್ ಠಾಣೆ | **ಪ್ರಾ.ಸಾ.** ಃ **13** | |
| **ವಾಸಸ್ಥಳ** | ಃ ಸರಸ್ವತಿಪುರಂ | **ಚಾ.ಸಾ.** ಃ **23** | |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು *2013* ರಿಂದ *2019* ರವರೆಗೆ ಲಕ್ಷ್ಮಿಪುರಂ ಪೋಲೀಸ್ ಠಾಣೆಯಲ್ಲಿ ಪೇದೆಯಾಗಿ ಕೆಲಸ ಮಾಡಿದ್ದೇನೆ. ಆ ಕಾಲಕ್ಕೆ ಇನ್ಸ್ ಪೆಕ್ಟರ್ ನಿರ್ದೇಶನದ ಮೇರೆಗೆ ಮೊ.ಸಂಖ್ಯೆ *50/2019* ಪ್ರಕರಣದಲ್ಲಿ ದಿಃ*21.08.2019* ರಂದು ನನ್ನನ್ನು ಮತ್ತು ಚಾ.ಸಾ–*22* ರವರನ್ನು ಆರೋಪಿತರ ಪತ್ತೆಗಾಗಿ ನೇಮಿಸಿದ್ದರು. ಆ ಕಾಲಕ್ಕೆ ನಾವಿಬ್ಬರು ಚಾಮರಾಜ ಮೊಹಲ್ಲಾ, ಚಾಮರಾಜಪುರಂ, ಕೃಷ್ಣಮೂರ್ತಿಪುರಂ, ಮುಂತಾದ ಕಡೆ ಹುಡುಕಾಡಿ ಬಲ್ಲಾಳ್ ಸರ್ಕಲ್ ನಲ್ಲಿದ್ದ ಈ ಪ್ರಕರಣದ ಆರೋಪಿತನನ್ನು ವಶಕ್ಕೆ ಪಡೆದು ಇನ್ಸ್ ಪೆಕ್ಟರ್ ಮುಂದೆ ಹಾಜರುಪಡಿಸಿದ್ದೆವು. ಆ ಬಗ್ಗೆ ಚಾ.ಸಾ–*22* ರವರು ವರದಿ ಕೊಟ್ಟಿದ್ದಾರೆ. ಕೋರ್ಟ್ ಮುಂದೆ ಇರುವ ಆರೋಪಿತನೇ ಆ ದಿನ ನಾವು ವಶಕ್ಕೆ ಪಡೆದ ಹಾಜರುಪಡಿಸಿದ್ದ ಆರೋಪಿತ ಇರುತ್ತಾನೆ.

***SC No.  137/2020***
***PW-13***

<u>ಪಾಟೀ ಸವಾಲು ಃ ಆರೋಪಿ ಪರ ವಕೀಲರಾದ ಶ್ರೀ ಎಸ್.ಕೆ.ಎಂ ರವರಿಂದಃ-</u>

*2.* ದಿಃ*21.08.2019* ರ ಬೆಳಗ್ಗೆ *9.30* ಕ್ಕೆ ನಾವು ಠಾಣೆಯಿಂದ ಹೊರಟಿದ್ದೆವು. ಆ ಕಾಲಕ್ಕೆ ನಾನು ಮತ್ತು ಚಾ.ಸಾ*–22* ಇಬ್ಬರೇ ದ್ವಿಚಕ್ರ ವಾಹನದಲ್ಲಿ ಹೋಗಿದ್ದೆವು. ಆ ವಾಹನ ಸಂಖ್ಯೆ ನೆನಪಿಲ್ಲ. ಆರೋಪಿಯನ್ನು ಬಲ್ಲಾಳ್ ಸರ್ಕಲ್ ನಲ್ಲಿ ನೋಡಿದ್ದೆವು. ಆರೋಪಿ ಅನುಮಾನಸ್ಪದವಾಗಿ ತಿರುಗಾಡುತ್ತಿದ್ದರಿಂದ ಮತ್ತು ನಮ್ಮನ್ನು ನೋಡಿ ಓಡಿಹೋಗಲು ಪ್ರಯತ್ನ ಮಾಡಿದ್ದರಿಂದ ಅವರನ್ನು ವಶಕ್ಕೆ ಪಡೆದಿದ್ದೇವು. ನಾವು ಬಲ್ಲಾಳ್ ಸರ್ಕಲ್ ಬಳಿ ಲಕ್ಷ್ಮಿಪುರಂ *1* ನೇ ಮೇನ್ ಕಡೆಯಿಂದ ಹೋಗಿದ್ದೆವು. ಆ ಕಾಲಕ್ಕೆ ಆರೋಪಿ ಸರ್ಕಲ್ ನ ಎಡಭಾಗದಲ್ಲಿ ಇದ್ದ. ಮದ್ಯಾಹ್ನ *1* ಗಂಟೆಗೆ ನಾವು ಆರೋಪಿತನನ್ನು ವಶಕ್ಕೆ ಪಡೆದಿದ್ದೆವು. ಆರೋಪಿಯನ್ನು ಹಿಡಿದುಕೊಂಡು ವಿಚಾರಣೆ ಮಾಡಿ ವಶಕ್ಕೆ ಪಡೆದಿದ್ದೆವು. ಆ ಕಾಲಕ್ಕೆ ನಾನೇ ಆರೋಪಿಯನ್ನು ಹಿಡಿದಿದ್ದೆ. ಆರೋಪಿಯನ್ನು ನಮ್ಮ ವಾಹನದಲ್ಲೇ ಠಾಣೆಗೆ ಕರೆದುಕೊಂಡು ಹೋಗಿದ್ದೆವು. ಆರೋಪಿ ಕಲ್ಲಂಗಡಿ ಹಣ್ಣನ್ನು ಆಪೇ ಆಟೋದಿಂದ ಇಳಿಸುತ್ತಿರುವಾಗ ನಮ್ಮ ಠಾಣೆಯ *4* ಜನ ಸಿಬ್ಬಂದಿಗಳು ಅವರನ್ನು ಜೀಪಿನಲ್ಲಿ ಕರೆದುಕೊಂಡು ಹೋಗಿದ್ದರು. ಆ ಕಾಲಕ್ಕೆ ನಾನು ಹೋಗಿರಲಿಲ್ಲ ಎಂದರೆ ಸರಿಯಲ್ಲ. ನಾನೇ ಆರೋಪಿಯನ್ನು ಹಿಡಿದಿದ್ದಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ- ಇಲ್ಲ.</u>

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*